O.S. 216/2015

P.W.1

**ಸಾಕ್ಷಿಯನ್ನು ದಿನಾಂಕಃ 18-08-2023 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಶ್ರೀ.ಪಿ.ಆರ್.ಕೆ.ವಕೀಲರವರಿಂದಃ**

ದಾವೆಗೆ ಮತ್ತು ಸಾಕ್ಷಿ ಪ್ರಮಾಣಪತ್ರ ಮತ್ತು ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ತಂದೆಯ ತಂದೆ ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪನಿಗೆ 7 ಜನ ಹೆಣ್ಣು ಮಕ್ಕಳು, 2 ಗಂಡು ಮಕ್ಕಳು ಇರುತ್ತಾರೆ. ಸದರಿಯವರು ನಾವು ಹುಟ್ಟಿದಾಗ ಹಿಸ್ಸೆ ಮಾಡಿಕೊಂಡಿರುತ್ತಾರೆ. ಅದಕ್ಕೆ ಸಂಬಂದಿಸಿದಂತೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ಮಲ್ಲಪ್ಪನ ಹೆಣ್ಣು ಮಕ್ಕಳಿಗೆ ಎಷ್ಟು ಹೋಯಿತು ಮತ್ತು ಗಂಡುಮಕ್ಕಳಿಗೆ ಎಷ್ಟು ಹೋಯಿತು ಎನ್ನುವ ಬಗ್ಗೆ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಹಾಲಪ್ಪ ಮತ್ತು ವೀರಭದ್ರಪ್ಪನಿಗೆ ಸರ್ವೆ ನಂ.531 ರಲ್ಲಿ ಕ್ಷೇತ್ರ 6 ಎಕರೆ ಪೈಕಿ ಅರ್ಧ- ಅರ್ಧ ಹಿಸ್ಸೆ, ಸರ್ವೆ ನಂ. 542 ರಲ್ಲಿ ಕ್ಷೇತ್ರ 6 ಎಕರೆ 98 ಸೆಂಟ್ಸ್ ಪೈಕಿ ಅರ್ಧ-ಅರ್ಧ ಹಿಸ್ಸೆ, ಸರ್ವೆ ನಂ.543 ಕ್ಷೆತ್ರ 2 ಎಕರೆ 26 ಸೆಂಟ್ಸ್ ಪೈಕಿ ಅರ್ಧ- ಅರ್ಧ ಭಾಗ ಬಂದಿರುತ್ತದೆ. ವೀರಭದ್ರಪ್ಪ ಮತ್ತು ಹಾಲಪ್ಪನಿಗೆ 43 ಅಡಿ ಉದ್ದ, 22 ಅಡಿ ಅಗಲ ಮನೆಯಲ್ಲಿ ಇಬ್ಬರಿಗೂ ಅರ್ಧ- ಅರ್ಧ ಭಾಗ ಹಂಚಿಕೊಂಡಿರುತ್ತಾರೆ. ಸದರಿ ಮನೆಯಲ್ಲಿ ಪೂರ್ವದಿಕ್ಕಿನ ಭಾಗ ಹಾಲಪ್ಪನಿಗೆ, ಉತ್ತರ-ದಕ್ಷಿಣಕ್ಕೆ ವೀರಭದ್ರಪ್ಪನ ಹಿಸ್ಸೆಗೆ ಬಂದಿರುತ್ತದೆ. ವೀರಭದ್ರಪ್ಪನ ಬಂದ ಹಿಸ್ಸೆಯಲ್ಲಿ ನಾವು ವಾಸಮಾಡುತ್ತಿದ್ದೆವೆ ಎಂದರೆ ಸಾಕ್ಷಿಯು ಎಲ್ಲಾರೂ ವಾಸ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಪಾಲುವಿಭಾಗದಲ್ಲಿ ಮಲ್ಲಪ್ಪನ ಹೆಣ್ಣು ಮಕ್ಕಳಿಗೆ ಯಾವುದೆ ಪಾಲನ್ನು ಕೊಟ್ಟಿರುವುದಿಲ್ಲ. ವೀರಭದ್ರಪ್ಪನಿಗೆ 5 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ದಾವಾ ಐಟಂ ನಂ.8 ಡೋರ್ ನಂ.82 ಮತ್ತು 89 ರ ಉತ್ತರಕ್ಕೆ ಏನು ಇರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ ಬಗ್ಗೆ ನನಗೆ ಗೋತ್ತಿರುವುದಿಲ್ಲ. ಐಟಂ ನಂ.5 ರಲ್ಲಿ ಸರ್ವೆ ನಂ.542 ರಲ್ಲಿ ನನ್ನ ಅಜ್ಜನಿಂದ ನನ್ನ ತಂದೆಯ ಹೆಸರಿನಲ್ಲಿ ಬಂದಿರುತ್ತದೆ. ಸರ್ವೆ ನಂ.531 ಒಟ್ಟು ಕ್ಷೇತ್ರ 7 ಎಕರೆ 21 ಸೆಂಟ್ಸ್ ನಮ್ಮ ಅಜ್ಜನಿಂದ ನಮ್ಮ ತಂದೆಗೆ ಬಂದಿರುತ್ತದೆ. ಸದರಿ ಆಸ್ತಿ ನನ್ನ ಅಜ್ಜನಿಂದ ತಂದೆಗೆ ಬಂದಿರುತ್ತದೆ ಅಂತ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕ್ಷೇತ್ರ 7 ಎಕರೆ 28 ಸೆಂಟ್ಸ್ ನಲ್ಲಿ ನನ್ನ ತಂದೆಗೆ ಎಷ್ಟು ಎಕರೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸುಮ್ಮನೆ ನಿಲ್ಲುತ್ತಾರೆ. ನಿಪಿ-1 ರ ಪ್ರಕಾರ ನನ್ನ ತಂದೆಗೆ ಎಷ್ಟು ಜನ ಮಕ್ಕಳು ಇದ್ದರೊ ಅವರನೆಲ್ಲಾ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಸದರಿಯವರ ಪೈಕಿ ಪ್ರೇಮವ್ವ ಪೋತಿಯಾಗಿರುತ್ತಾಳೆ. ಸದರಿಯವಳು ತೀರಿಕೊಂಡು 4-5 ವರ್ಷವಾಗಿರುತ್ತದೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಮೃತ ಪ್ರೇಮವ್ವಳಿಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗನಿರುತ್ತಾನೆ. ಮಗ ಪೋತಿಯಾಗಿರುತ್ತಾರೆ. ಸದರಿಯವನಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ.

O.S. 216/2015

P.W.1

2. ನನ್ನ ತಮ್ಮ ಜಯಪ್ಪನಿಗೆ ಮದುವೆಯಾಗಿರುವುದಿಲ್ಲ. ಜಯಪ್ಪ ಮತ್ತು ನನ್ನ ತಾಯಿ ಇಬ್ಬರು ಒಂದೇ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಸಹೋದರ ನಾಗರಾಜಪ್ಪ ಸರ್ವೆ ನಂ.72 ರಲ್ಲಿ ಮನೆಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಮನೆ ಕಟ್ಟಿ 15 ವರ್ಷಗಳಾಗಿರುತ್ತದೆ ಎಂದರೆ ಸರಿ. ಇನ್ನೊಬ್ಬ ಸಹೋದರನಾದ ಮಲ್ಲಪ್ಪ ತನ್ನ ಹೆಂಡತಿಯ ಮನೆಯಲ್ಲಿ ವಾಸವಾಗಿರುತ್ತನೆ ಎಂದರೆ ಸರಿ. ರಾಣೇಬೆನ್ನೂರಿನ ಅಂಕಸಾಪುರದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಹೆಂಡತಿಯ ತವರು ಮನೆಯಲ್ಲಿ ಗಂಡು ಸಂತಾನ ಇಲ್ಲದಿರುವುದರಿಂದ ಆತನೇ ಅಲ್ಲಿ ವಾಸವಗಿರುತ್ತಾನೆ ಎಂದರೆ ಸರಿ.

3. ನಾಗರಾಜಪ್ಪನು ಡೋರ್ ನಂ.72 ರಲ್ಲಿ ಸ್ವಲ್ಪ ಭಾಗದಲ್ಲಿ ಎರಡು ಕೋಣೆಗಳನ್ನು ಇನ್ನೊಬ್ಬ ಸಹೋದರನಾದ ಬಸವರಾಜಪ್ಪ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯ ಕೊಟ್ಟ ಜಾಗೆಯಲ್ಲಿ ಮನೆಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯ ತವರು ಮನೆ ರಾಣೇಬೆನ್ನೂರು ತಾಲೂಕು, ಕೋಟೆಗೋಡೆ ಇರುತ್ತದೆ. ನಾನು ವೀರಭದ್ರಪ್ಪನ ಎರಡನೇ ಮಗನಿರುತ್ತೇನೆ. ನನ್ನ ತಂದೆ ತೀರಿಕೊಂಡ ಸ್ವಲ್ಪ ದಿನದಲ್ಲಿ ನಾವು ಬೇರೆಯಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು 1992-93 ರಲ್ಲಿ ಮದುವೆಯಾಗಿರುತ್ತೇನೆ. ನನ್ನ ಹೆಂಡತಿ ಮದುವೆಯಾದ ನಂತರ ಸದರಿಯವಳು ಬಯಲುಸೀಮೆಯವಳಾಗಿದ್ದು, ನಮ್ಮ ಮನೆಯ ವಾತಾವರಣ ಬೇರೆಯಾಗಿರುವುದರಿಂದ ನಾವು ಹೊಂದಿಕೊಳ್ಳದೇ ಬೇರೆಯಾಗಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**